ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2287/2017

ಪ್ರಾಸಾ:2

ದಿನಾಂಕ: 04.02.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಶ್ರೀನಿವಾಸ |
| ತಂದೆಯ ಹೆಸರು | : | ನಾರಾಯಣ ಆಚಾರ್ಯ |
| ವಯಸ್ಸು | : | 70 ವರ್ಷ |
| ಉದ್ಯೋಗ | : | ಮನೆಯಲ್ಲಿ ಇರುವುದು |
| ವಾಸ ಸ್ಥಳ | : | ಗೋಪಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಪಿರ್ಯಾದಿ ಪರ ವಕೀಲರಿಂದ:</u>**

ಈ ದೂರನ್ನು ಅನಂತ ಕಾಮತ್ ರವರು 13 ಜನರ ವಿರುದ್ದ ದಾಖಲಿಸಿರುತ್ತಾರೆ. ಅವರುಗಳ ಹೆಸರುಗಳು ನನಗೆ ತಿಳಿದಿರುತ್ತದೆ. ನಮ್ಮ ಸ್ವತ್ತಿನ ಉತ್ತರಕ್ಕೆ ಪಿರ್ಯಾದುದಾರರ 60 ಸೆಂಟ್ಸ್ ಆಸ್ತಿ ಇದೆ. ಅದರಲ್ಲಿ ತೆಂಗು, ಅಡಿಕೆ ಮರಗಳು, ಬಾಳೆ ತೋಟ, ವಾಸದ ಮನೆ ಇವೆ. ಅದರ ಗಡಿಗಳಿಗೆ ಬೇಲಿ ಅಳವಡಿಸಿದ್ದಾರೆ. ಸದ್ರಿ ಸ್ವತ್ತಿನ ಸ್ವಾಧೀನದಲ್ಲಿ ಪಿರ್ಯಾದುದಾರರೇ ಇರುತ್ತಾರೆ. ದಾರಿಯ ವಿಚಾರದಲ್ಲಿ ತಕರಾರು ಆಗಿರುತ್ತದೆ. ದಾರಿ ಬೇಕು ಎಂದು ಆರೋಪಿತರು ಕೇಳಿರುತ್ತಾರೆ. ಆದರೆ ಸ್ಥಳದಲ್ಲಿ ಯಾವುದೇ ದಾರಿ ಇರುವುದಿಲ್ಲ. ಪಿರ್ಯಾದುದಾರರ ಸ್ವತ್ತಿನ ಪಾಗರವನ್ನು ಆರೋಪಿತರು ಒಡೆದು ಹಾಕಿರುತ್ತಾರೆ. ಮರವನ್ನು ಕಡಿದು ಮಣ್ಣು ಹಾಕಿರುತ್ತಾರೆ. ಆಗ ಪಿರ್ಯಾದುದಾರರು ಮನೆಯಲ್ಲಿಯೇ ಇದ್ದರು. ಅನಂತರ ಠಾಣೆಯಲ್ಲಿ ದೂರು ನೀಡಿರುತ್ತಾರೆ.

ಅನಂತರ ಪೊಲೀಸರು ಬಂದು ತನಿಖೆ ಮಾಡಿರುತ್ತಾರೆ. ಆಗ ನನ್ನ ಸಹಿ ಪಡೆದಿರುತ್ತಾರೆ. ಸ್ಥಳದಲ್ಲಿ ಏನು ಬರವಣಿಗೆ ಮಾಡಿದ್ದಾರೆ ಎಂದು ನನಗೆ ತಿಳಿದಿಲ್ಲ. ರಸ್ತೆ ಮಾಡುವ ಉದ್ದೇಶದಿಂದ ಆರೋಪಿತರು ಅಂತಹ ಕೃತ್ಯ ಎಸಗಿದ್ದಾರೆ. ಅಲ್ಲಿ ಮೊದಲಿನಿಂದಲೂ ರಸ್ತೆ ಇರಲಿಲ್ಲ. ಅದು ನಾವು

ಸಾಗುವಳಿ ಮಾಡುತ್ತಿದ್ದ ಗದ್ದೆ. ಧರೆ ಒಡೆದು ಬೇಲಿ ಮಾಡುವಾಗ ಯಾವುದಾದರೂ ಪರಿಕರಗಳನ್ನು ತಂದಿದ್ದಾರಾ ಎಂದು ನಾನು ಗಮನಿಸಿಲ್ಲ. ನಾನು ಹೋಗುವ ವೇಳೆಗೆ ಗಲಾಟೆಯಾಗುತ್ತಿತ್ತು.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲಿಗಾಗಿ ಕಾಲವಕಾಶ ಕೋರಿದ ಮೇರೆಗೆ ವಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**